## ಅರಿವೇ ಗುರು (ಗದ್ಯ)

ಮೌಲ್ಯ - ಉಪಾಯ ಬಲ್ಲವನಿಗೆ ಅಪಾಯವಿಲ್ಲ.

---

ಪದಗಳ ಅರ್ಥ:

1) ಸದ್ದು - ಗದ್ದಲ
2) ಮೇವು - ಆಹಾರ
3) ಅಪಾಯ - ಕೇಡು
4) ತೋಚದೆ - ದಿಕ್ಕು ಕಾಣದೆ
5) ಅನಿವಾರ್ಯ - ತಪ್ಪಿಸಲಾಗದ
6) ಕಂಡಿ - ರಂಧ್ರ
7) ಸಮೀಪ - ಹತ್ತಿರ

ಓದಿದ ಪದಗಳು :

| | | |
|---|---|---|
| ಧ್ವನಿ | ಸ್ವಲ್ಪ | ಆತಂಕ |
| ಅನಿವಾರ್ಯ | ಸದ್ದು | ಬಲೆ |
| ಹತ್ತಿರ | ಜಿಗಿದಾಡು | ತೋಟ |
| ಆಹಾರ | ಸುಳಿವು | ಬಲಹೀನ |
| ಕೋಳಿ | ಹಿಗ್ಗಿತು | ಉಪಾಯ |
| ಬೇಲಿ | ನುಗ್ಗಿತು | ಅಡಗಿ |

---

ಅ) ಈ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.

೧. ಕಾಡಿನಲ್ಲಿ ಆಹಾರ ಹುಡುಕುತ್ತಾ ಯಾರು ಬಂದರು?
ಉತ್ತರ : ಕಾಡಿನಲ್ಲಿ ಆಹಾರ ಹುಡುಕುತ್ತಾ ನರಿ ಮತ್ತು ಅದರ ಮರಿ ಬಂದರು.

೨. ನರಿಗೆ ತೋಟದ ಕಡೆಯಿಂದ ಯಾವ ಸದ್ದು ಕೇಳಿತು?
ಉತ್ತರ: ನರಿಗೆ ತೋಟದ ಕಡೆಯಿಂದ ಕ್ಕೊ ಕ್ಕೊ ಕ್ಕೊ ಎಂಬ ಸದ್ದು ಕೇಳಿತು.

೩. ನರಿಯ ಮರಿ ಎಲ್ಲಿ ಸಿಕ್ಕಿಕೊಂಡಿತು?
ಉತ್ತರ: ನರಿಯ ಮರಿ ಬಲೆಯಲ್ಲಿ ಸಿಕ್ಕಿಕೊಂಡಿತು.

೪. ನರಿಯು ಬಲೆಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದವರು ಯಾರು?
ಉತ್ತರ: ನರಿಯು ಬಲೆಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದವರು ಇಲಿಗಳು.

---

ಆ) ಆವರಣದಲ್ಲಿ ಸೂಕ್ತ ಪದವನ್ನು ಆರಿಸಿ ಬಿಟ್ಟ ಸ್ಥಳದಲ್ಲಿ ಬರೆಯಿರಿ.

೧. ನರಿಗೆ ದೂರದಲ್ಲಿ ತೋಟದ ಮನೆಯೊಂದು ಕಾಣಿಸಿತು.
( ಕೊಳವೊಂದು, ಗುಹೆಯೊಂದು, ಮನೆಯೊಂದು )

೨. ಸಮಯ ಸಾಧಿಸಿ ಸ್ವಲ್ಪ ದೂರದಲ್ಲಿ ಕುಳಿತಿತು .
( ಮಲಗಿತು, ನಿಂತಿತು, ಕುಳಿತಿತು )

Edit with WPS Office

೩. ಕೋಳಿಗಳನ್ನು ಕಂಡು ನರಿಯ ಮರಿಯು ಮನದಲ್ಲೇ ಹಿಗ್ಗಿತು.
( ಕುಗ್ಗಿತು, ಓಡಿತು, ಹಿಗ್ಗಿತು )

---

ಇ) ಈ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

೧. "ಅಮ್ಮಾ, ಎಷ್ಟೊಂದು ಕೋಳಿಗಳು!"
ಯಾರು ಹೇಳಿದರು?: ನರಿಯ ಮರಿ
ಯಾರಿಗೆ ಹೇಳಿದರು?: ನರಿಗೆ

೨. "ನಿಮ್ಮ ಹಲ್ಲುಗಳು ಬಲಹೀನವಾಗಿವೆಯಲ್ಲವೆ?"
ಯಾರು ಹೇಳಿದರು?: ನರಿ
ಯಾರಿಗೆ ಹೇಳಿದರು?: ಇಲಿಗಳಿಗೆ

೩. ನಮ್ಮ ಹಲ್ಲುಗಳು ಗಟ್ಟಿಯಾಗಿಯೇ ಇವೆ ".
ಯಾರು ಹೇಳಿದರು?: ಇಲಿಗಳು
ಯಾರಿಗೆ ಹೇಳಿದರು?: ನರಿಗೆ

---

ಈ) ಸಾಕು ಪ್ರಾಣಿಗಳ ಹೆಸರನ್ನು ಬರೆಯಿರಿ.

೧. ಬೆಕ್ಕು
೨. ನಾಯಿ
೩. ಆಕಳು
೪. ಕುರಿ
೫. ಕುದುರೆ
೬. ಎಮ್ಮೆ

---

ಉಕ್ತಲೇಖನ

೧. ಉಪಾಯ
೨. ಹಿಗ್ಗಿತು
೩. ಹತ್ತಿರ
೪. ಸದ್ದು
೫. ಕೋಳಿ
೬. ಬೇಲಿ
೭. ಅಡಗಿ
೮. ನುಗ್ಗಿತು
೯. ತೋಟ
೧೦. ನುಗ್ಗಿತು

Edit with WPS Office